

ಭಾರತ–ಪಾಕಿಸ್ತಾನ ಸರಹದ್ದಿನಲ್ಲಿರುವ ಹುಸೇನಿವಾಲ ಸ್ವಾತಂತ್ರ್ಯಯೋಧರ ನೆನಪುಗಳಿಗಾಗಿ ನಿತ್ಯ ನೆನಪಿಸಿಕೊಳ್ಳಬೇಕಾದ ಸ್ಥಳ. ಭಗತ್ ಸಿಂಗ್, ಶಿವರಾಮ್ ರಾಜಗುರು ಮತ್ತು ಸುಖ್‌ದೇವ್ ಅವರ ಸ್ಮೃತಿಗಳಿರುವ ತ್ರಿವೇಣಿ ಸಂಗಮವಿದು.


# ಹುಸೇನಿವಾಲ

## ಸರಹದ್ದಿನಲ್ಲಿ ಹುತಾತ್ಮರ ಸ್ಮರಣೆಯ ತಾಣ

ಡಾ. ಕೀರ್ತಿ ಮಲ್ಹೋತ್ರ

ಸುಮಾರು ಆರು ದಶಕಗಳ ಹಿಂದೆ ನನ್ನ ತಂದೆಗೆ ಫಿರೋಜ್‌ಪುರಕ್ಕೆ ವರ್ಗವಾಗಿತ್ತು. ಅಲ್ಲಿದ್ದಾಗ ಅವರು ನನ್ನನ್ನು, ನನ್ನಕ್ಕ ಮತ್ತು ತಮ್ಮನೊಡನೆ, ನನ್ನ ಶಾಲೆಯ ಸಹಪಾಠಿಗಳೊಡನೆ ಇಂಡೊ–ಪಾಕ್ ಸರಹದ್ದಿನ ಬಳಿಯ ಹುಸೇನಿವಾಲಕ್ಕೆ 'ಹುತಾತ್ಮರ ಸ್ಮರಣೆಯ ತಾಣ'ಕ್ಕೆ ಆಗಾಗ್ಗೆ ಕರೆದೊಯ್ಯುತ್ತಿದ್ದರು. ಕೆಚ್ಚೆದೆಯ ಕ್ರಾಂತಿಕಾರಿಗಳಾದ ಶಹೀದ್–ಎ–ಆಸಮ್ ಭಗತ್ ಸಿಂಗ್, ಶಹೀದ್ ಶಿವರಾಮ್ ರಾಜಗುರು ಮತ್ತು ಶಹೀದ್ ಸುಖ್‌ದೇವ್ ಥಾಪರ್ ಅವರುಗಳಿಗೆ ಶಿರಬಾಗಿ ನಮಿಸಲು ಹೊರಟ ಪಯಣದುದ್ದಕ್ಕೂ, ಅವರುಗಳು ದೇಶಕ್ಕಾಗಿ ಮಾಡಿದ ತ್ಯಾಗದ ಕಥೆಯನ್ನು ಹೇಳುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದವರ ಮರೆಯಲಾರದ ಕಥೆಯದು. ಈ ಮೂವರು ಹುತಾತ್ಮರು ಮತ್ತು ಪಂಜಾಬ್ ಕೇಸರಿ ಲಾಲಾ ಲಾಜ್‌ಪತ್ ರಾಯ್ ಅವರು, ಈ ಹಿರಿಯರ ಹೀರೊಗಳಾಗಿದ್ದರು. ಕ್ರಾಂತಿಕಾರಿ ಭಗತ್ ಸಿಂಗ್ ಪಂಜಾಬಿನ ದೇಶಭಕ್ತ ಸಿಖ್ ಕುಟುಂಬದಲ್ಲಿ ಜನಿಸಿದವರು.

ನಮ್ಮನ್ನಲ್ಲಿಗೆ ಕರೆದೊಯ್ಯುತ್ತಿದ್ದ ಬಹುಪಾಲು ಹಿರಿಯರು, ನನ್ನ ತಂದೆತಾಯಿಯನ್ನೂ ಸೇರಿದಂತೆ, ದೇಶ ಇಬ್ಭಾಗವಾದಾಗ ಬೇರುಕಿತ್ತು ಭಾರತಕ್ಕೆ




ವಲಸೆ ಬಂದವರು; ನಿರಾಶ್ರಿತರಾಗಿ ಬದುಕು ಆರಂಭಿಸಿದವರು. ನನ್ನ ತಂದೆ ಹಳೇದಿಲ್ಲಿಯಲ್ಲಿ ರೈಲ್ವೇನಲ್ಲಿ ಅತ್ಯಂತ ಕೆಳಸ್ತರದ ನೌಕರರಾಗಿ ದುಡಿಯಲು ಆರಂಭಿಸಿದ್ದರು. ಒಂದಿಷ್ಟು ತಾಂತ್ರಿಕ ಕೌಶಲಗಳನ್ನು ಪಡೆದುಕೊಂಡು ಫಿರೋಜ್‌ಪುರಕ್ಕೆ ಬರುವ ಹೊತ್ತಿಗೆ ರೈಲ್ವೇನಲ್ಲಿ ತಂತ್ರಜ್ಞರಾಗಿ ಸ್ವಲ್ಪ ಮೇಲೆ ಬಂದಿದ್ದರು.

ನನಗೆ ಮಬ್ಬಾಗಿ ನೆನಪಿದೆ, ಹುಸೇನಿವಾಲಕ್ಕೆ ನಾವು ತಲುಪಿದಾಗ, ಅಲ್ಲೊಂದು ಸಣ್ಣ ಆವರಣವಿತ್ತು. ಅಲ್ಲಿದ್ದ ಗೋಡೆಯ ಮೇಲೆ ಮೂವರು ಹುತಾತ್ಮರ ಚಹರೆಯನ್ನು ಬಣ್ಣದಲ್ಲಿ ಬಿಡಿಸಿದ್ದರು. ಬಳಿಯಲ್ಲಿ ಹಳೆಯ ರೈಲು ಪ್ಲಾಟ್‌ಫಾರ್ಮ್ ಒಂದನ್ನು ಆವರಿಸಿದ್ದ ಕಟ್ಟಡವೊಂದು ಪಾಳು ಬಿದ್ದಿತ್ತು. ಅದು 1965ಕ್ಕೂ ಹಿಂದಿನ ಇಂಡೊ–ಪಾಕ್ ಯುಗ. ನಾವು ಮಕ್ಕಳು, ಉಪಯೋಗಿಸದೆ ಬಿಟ್ಟ ರೈಲು ಹಳಿಗಳ ಮೇಲೆ ಸರಹದ್ದಿನ ಈಚೆ–ಆಚೆ ಆಡುತ್ತಿದ್ದೆವು.

ಪಂಜಾಬಿನ ನೆಲದಲ್ಲಿ ನಾನು ಬೆಳೆಯುತ್ತಿದ್ದಂತೆ,